Regd No M 1299 Sri ತಾ॥ 22—10—51
SATYAVADI — 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ಎ. ಸುಬ್ಬರಾಯರು | ಬಿಡಿ ಪ್ರತಿ 3 ಪೈ

ತನಿಖೆ ನಡೆಯುತ್ತಿದೆ

ಮಾಗಡಿಯಿಂದ ರಹದಾರಿ ಇಲ್ಲದೆ 3 ಸಾವಿರ ಗಳುಗಳನ್ನು ಸಾಗಿಸುತ್ತಿದ್ದ ಲಾರಿಯೊಂದನ್ನು ಪೋಲೀಸರು ಹಿಡಿದು ತನಿಖೆ ನಡೆಸುತ್ತಿದ್ದಾರೆ

ಉಡ್‌ಲ್ಯಾಂಡ್ಸ್
ಜಯಪ್ರದ 3 ನೇ ವಾರ
ಶ್ರೀ ಗಣೇಶ ಜನ್ಮ
ನಿರೂಪ ರಾಯ್, ತ್ರಿಲೋಕ್ ಕಪೂರ್
ಪ್ರತಿ ಸಂಸಾರವೂ ನೋಡಲೇಬೇಕಾದ
ಅಮೋಘ ಪೌರಾಣಿಕ ಹಿಂದಿ ಚಿತ್ರ

ಕಾಲೇಜಿಗೆ ದಾನ

ಕಾರವಾರದಲ್ಲಿ ಇತ್ತೀಚಿಗೆ ಮರಣ ಹೊಂದಿದ ಶ್ರೀ ವೆಂಕಟರಮಣ ಎಂಬ ಮೋಟಾರು ಡ್ರೈವರನು ಮರಣಪೂರ್ವದಲ್ಲಿ ಒಂದು ಮೃತ್ಯು ಪತ್ರ ಮಾಡಿ ತನ್ನ ಜೀವವಿಮಾ ಹಣದಲ್ಲಿ ಸಾವಿರ ರೂಪಾಯಿಗಳನ್ನು ಕುಮಟಾದಲ್ಲಿಯ ಕ್ಯಾನರ ಕಾಲೇಜಕ್ಕೆ ಕೊಡತಕ್ಕದ್ದೆಂದು ಬರೆದಿರುವನು ಈ ಹಣದಿಂದ ಮೃತಾತ್ಮರ ಹೆಸರಿನಲ್ಲಿ ಬಡ ವಿದ್ಯಾರ್ಥಿಯೊಬ್ಬನಿಗೆ ಇನಾಮು ಇಲ್ಲವೇ ವಿದ್ಯಾರ್ಥಿ ವೇತನ ಕೊಡಲಾಗುವದು

× ದೆಹಲಿಯಲ್ಲಿ ನಡೆದ 57 ನೇ ಕಾಂಗ್ರೆಸ್ ಅಧಿವೇಶನದಲ್ಲಿ ಪಂ॥ ನೆಹರುವಿಗೆ ಅತ್ಯಂತ ಹೆಚ್ಚು ಬೆಂಬಲ ಸಿಕ್ಕಿತೆಂದು ವರದಿಯಾಗಿದೆ

ಅಪೇರ— ಕೀರ್ತಿಯುತ 4 ನೇ ವಾರ
ಸರ್ವಾಧಿಕಾರಿ
ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರನ್, ನಂಬಿಯಾರ್
ಮಹೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ರಣಜಿತ್ ಅಮೋಘ 4 ನೇ ವಾರ
ಶಬಿಸ್ತಾನ್
ಪಾತ್ರ : ಶ್ಯಾಂ, ನಸೀಂ, ಸಪ್ರೂ, ಕಕ್ಕೂ
ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

— ಜನಪ್ರಿಯ 2 ನೇ ವಾರ —
ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ
ಸುಖಸಂಪತ್ ಚಿತ್ರಪಟದವರ ಸುಂದರ ಪೌರಾಣಿಕ ಚಿತ್ರ
❁ ತಿಲೋತ್ತಮೆ (ಕನ್ನಡ)
ಭೂಮಿಕೆ— ಜಯಶ್ರೀ, ಜಿ. ಆರ್. ನ್ಯಾಂಡೋ, ಕಲಾವಿಶಾರದ ಕೊಟ್ಟೂರಪ್ಪ
ಪ್ರತಿ ದಿನ 3 ಆಟಗಳು
— SUKH SAMPATH CHITRAPAT Release

ಚುನಾವಣಾ ಪಟ್ಟಿ ಬಗೆಗೆ ಪಂ. ನೆಹರು ಅಸಮಾಧಾನ

ಮೈಸೂರು ರೇಸಸ್

ನಿನ್ನೆಯ ದಿನದ ಫಲಿತಾಂಶ

1 ಸ್ಟಾರ್ ಪ್ಲೇಟ್

ಗೋವಿಂದ ಚಂದ್ರು, ಛಾಲೆಂಜ್.
ಟೋಟು — ವಿನ್ ರೂ. 46. ಪ್ಲೇಸ್ ರೂ 8-8-0, 9-8-0, 7-0-0.

2 ಸಿಟಿ ಪ್ಲೇಟ್

ಮೈ ಬೇಬಿ, ಮಿಸ್ ಪಾಪ್.
ಟೋಟು — ವಿನ್ ರೂ 18, 12. ಪ್ಲೇಸ್ ರೂ 10-8-0, 12

3 ಮೆಂಬರ್ಸ್ ಪ್ಲೇಟ್

ಮೈ ಛಾನ್ಸ್, ಫೈರ್ ಫ್ಲವರ್.
ಟೋಟು — ವಿನ್ ರೂ 17, ಪ್ಲೇಸ್ ರೂ. 10, 11

4 ಚಾಮುಂಡಿ ಪ್ಲೇಟ್

ಲೌವಡ್ಸ್ರ್, ಫ್ಲೀಟ್ ವಿಂಗ್ಸ್.
ಟೋಟು — ವಿನ್ ರೂ. 11, 18, ಪ್ಲೇಸ್ 11 ವರೆ, 16

5 ಪ್ಲಾಂಟರ್ಸ್ ಪ್ಲೇಟ್

ಐಶಲ್ ಸನ್, ಲೇಡಿ ಲಿಮಾರ್ಚ್, ಇಂಡಿಯನ್ ಫ್ಲವರ್.
ಟೋಟು — ವಿನ್ ರೂ. 14, ಪ್ಲೇಸ್ ರೂ. 6, 6, 6.

6 ಅಲ್‌ಕಮರ್ಸ್ ಪ್ಲೇಟ್

ಗೋಲ್ಡನ್ ಮೆಮರಿ, ಸ್ಟಾರ್ ಅಫ್ ಸೀತು ಡಿ ಡೇ.
ಟೋಟು — ವಿನ್ ರೂ 73 ವರೆ, ಪ್ಲೇಸ್ ರೂ. 23 ವರೆ, 11, 35 ವರೆ

7 ಮೂರನ್ ಪ್ಲೇಟ್

ಬೆಂಟೋಟ, ಡ್ಯಾನಿ ಬಾಯ್, ಆಸ್ಕರ್
ಟೋಟು — ವಿನ್ ರೂ 9, ಪ್ಲೇಸ್ ರೂ. 6, 16, 6 ವರೆ

ಸತ್ಕಾರ ಕೂಟ

ಅಖಿಲ ಭಾರತ ವಸ್ತುಪ್ರದರ್ಶಕರ ಸಂಘದವರು ಈ ಬೆಳಿಗ್ಗೆ ಸಚಿವ ಶ್ರೀ ಆರ್ ಚನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಈ ಬೆಳಿಗ್ಗೆ ದಸರಾ ವಸ್ತುಪ್ರದರ್ಶನ ಸದಸ್ಯರ ಗೌರವಾರ್ಥ ಸತ್ಕಾರ ಕೂಟವನ್ನೇರ್ಪಡಿಸಿದ್ದರು ಸಚಿವ ಶ್ರೀ ಟಿ ಮರಿಯಪ್ಪನವರು ಆಹ್ವಾನಿತರಾಗಿದ್ದರು

× ಮೈಸೂರು ದಸರೆ ವಸ್ತುಪ್ರದರ್ಶನದ ಸಮಾಪ್ತ ಸಮಾರಂಭವನ್ನು ಸಚಿವ ಶ್ರೀ ಟಿ. ಮರಿಯಪ್ಪನವರು ನಿನ್ನೆ ಸಂಜೆ ನೆರವೇರಿಸಿದರು.

ದಿವ್ಯ ವಾಣಿ

ಒಂದೇ ಒಂದು ಸತ್ಕೃತಿಯನ್ನು ಮಾಡಿದ್ದಾದರೆ ಜೀವಮಾನವಿರುವವರೆಗೆ ಶತೋಪದೇಶ ಮಾಡುವದಕ್ಕಿಂತಲೂ ಶ್ರೇಷ್ಠ — ಲೋವೆಲ್

ಸೌಹಾರ್ದ ಸಾಧ್ಯ

ಲಿಯಾಕತ ಅಲಿ ನಿಧನದ ಬಗ್ಗೆ ಪಂ। ನೆಹರು ಕಳಿಸಿದ ಸಂದೇಶದಿಂದ ಪಾಕಿಸ್ತಾನಗಳ ಕರಳು ಮಿಡಿದಿದೆ ಇದರಿಂದ ಎರಡೂ ರಾಜ್ಯಗಳಲ್ಲಿ ಸೌಹಾರ್ದ ಬೆಳೆಯುವ ಆಸೆಯಿದೆ ಎಂದು ಜಾಡೋನಿನ ಮುಖ್ಯಸ್ಥರಾದ ಖಾನ್ ಫಕೀರ ಖಾನರು ತಿಳಿಸಿರುವರು

ಬೆಲೆಯಿಲ್ಲದ ಒಪ್ಪಂದ

ರಷ್ಯದೊಡನಾದ ಒಪ್ಪಂದಕ್ಕೆ ಬೆಲೆ ಇಲ್ಲವೆಂದು ವಾಷಿಂಗ್ಟನ್ನಿನಲ್ಲಿ ಟ್ರೂಮನ್ನರು ಖಚಿತಾಭಿಪ್ರಾಯ ವ್ಯಕ್ತಮಾಡಿದ್ದಾರೆ

ವಿನಾಯಿತಿ

ಶ್ರೀಮನ್ಮಹಾರಾಜರವರಿಗೆ ಸೇರಿದ ಎಲ್ಲ ಮನೆಗಳಿಗೂ ಬಾಡಿಗೆ ಮತ್ತು ವಸತಿ ಹತೋಟಿ ಕಾನೂನಿನಿಂದ ವಿನಾಯಿತಿ ಕೊಡಲಾಗಿದೆ

ಸರ್ಕಾರ ವಹಿಸುವುದು

ದಿವಂಗತ ಲಿಯಾಕತ ಅಲಿಯವರ ಪತ್ನಿ ಪುತ್ರರ ಜೀವನ ವೆಚ್ಚದ ಹೊಣೆಯನ್ನು ಸರ್ಕಾರವೇ ತೆಗೆದುಕೊಳ್ಳುವ ಏರ್ಪಾಟಾಗುತ್ತಿದೆ

ಪ್ರಾತಿನಿಧ್ಯ ಸಾಲದು

ಮೊನ್ನೆ ದೆಹಲಿಯಲ್ಲಿ ಕೂಡಿದ್ದ ಕೇಂದ್ರ ಮತ್ತು ಪ್ರಾಂತ್ಯ ಚುನಾವಣಾ ಸಮಿತಿ ಮತ್ತು ಪ್ರಾಂತ್ಯ ಮುಖ್ಯಸಚಿವರನ್ನುದ್ದೇಶಿಸಿ ಭಾಷಣ ಮಾಡುತ್ತಾ ಮಹಾಚುನಾವಣೆಗೆ ಅಲ್ಪ ಸಂಖ್ಯೆಯಲ್ಲಿ ಮಹಿಳಾ ಉಮೇದುವಾರರಿಗೆ ಅವಕಾಶವಿತ್ತಿರುವ ಬಗೆಗೆ ಪಂ॥ನೆಹರು ಅಸಮಾಧಾನ ವ್ಯಕ್ತಮಾಡಿದರು

ದಸ್ತಗಿರಿ

ಪಶ್ಚಿಮ ಬಂಗಾಳದ ರಕ್ಷಣ ಶಾಸನ ಅನ್ವಯ ಪೂರ್ವ ಪಾಕೀಸ್ತಾನದ ಮಹಮದೀಯನೋರ್ವ ಬಂಧಿಸಲ್ಪಟ್ಟಿರುವ ವಾರ್ತೆ ಕಲ್ಕತ್ತಾದಿಂದ ಬಂದಿದೆ

× ತರೀಕೆರೆ ಗೋವಿಂದ್ಪುರ ಕಾವಲಿ ಬೇಟೆಗೆ ಅನುಮತಿ ಕೊಟ್ಟರೂ ವರ್ಧ ಇದೆ

ಸಂಪುಟ ೧೨ ಸಂಚಿಕೆ ೯ ॥ ಶ್ರೀ ॥ ತಾ॥ 22-10-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಧರ್ಮ ಮತ್ತು ಭಗವಂತನ ವಿರುದ್ಧ ಚಳವಳ

[ಜಿ ಆರ್ ಮಹಾಬಲಭಟ್ಟ, ವೇದಾಂತ ಶಿರೋಮಣಿ, ವೇದಾಂತ ವಿಶಾರದ,
ದ್ವಾರಕಾ ಸಂಸ್ಥಾನ, ಮುಳಬಾಗಿಲು ಮಠ]

(ಮುಂದುವರಿದದು)

ನಾವು ಯಾವ ರೀತಿಯಿಂದ ಭೋಜನಮಾಡುವುದು, ಯಾವ ತರಹದ ಬಟ್ಟೆ ಉಡುವುದು, ಅಥವಾ ಉಡದೇ ಇರುವುದು, ಯಾವ ಉತ್ಸವವನ್ನು ನಡೆಸಬೇಕು ಅಥವಾ ನಡೆಸಬಾರದು, ದೇವಾಲಯ – ಮಸೀದಿ – ಚರ್ಚುಗಳಿಗೆ ಹೋಗುವುದೇ ಅಥವಾ ಬೇಡವೇ, ಸಂಧ್ಯಾವಂದನೆ, ಜಪ, ಪೂಜೆ ಮುಂತಾದುವನ್ನು ಮಾಡುವುದೇ ಅಥವಾ ಬಿಡುವುದೇ, ಮಾಡುವುದಾದರೆ ಹೇಗೆ, ತಿಲಕವಿಟ್ಟುಕೊಳ್ಳಬೇಕೇ ಬೇಡವೇ, ಇಟ್ಟುಕೊಳ್ಳುವುದಾದರೆ ಹೇಗೆ, ಯಜ್ಞೋಪವೀತಧಾರಣೆಯು ಅಗತ್ಯವೇ ಅಥವಾ ಅಗತ್ಯವಿಲ್ಲವೇ, ಜುಟ್ಟನ್ನಿಡುವುದೇ ಬೇಡವೇ, ಗಡ್ಡಮೀಸೆಗಳಿರಬೇಕೇ ಬೇಡವೇ, ಇವೇ ಮುಂತಾದ ಸಮಾಚಾರ ಮೂಲಕವಾದ ಪ್ರಶ್ನೆಗಳುಂಟಾಗುತ್ತಿದ್ದರೂ ಕೂಡ ಅವು ವಿವಾದದ ಪ್ರಶ್ನೆಗಳೂ ; ಅವನ್ನು ನಾವು 'ಸಂಪ್ರದಾಯ' ವೆನ್ನುತ್ತೇವೆ. ಪರಸ್ಪರ ಮತಭೇದಕ್ಕೂ ಜಗಳಕ್ಕೂ ಈ ಸಂಪ್ರದಾಯವೇ ಕಾರಣವಾಗಿರುವುದು

— ಸಂಪ್ರದಾಯದ ಮಾತು —

'ಒಳ್ಳೇದು, ಜಗಳಕ್ಕೆ ಸಂಪ್ರದಾಯವೇ ಕಾರಣವೆಂದಾದರೆ ಇದನ್ನು ದೂರಮಾಡಬೇಕು' ಎಂದೀಗ ಹೇಳುವುದಾದರೆ, ಬನ್ನಿರಿ ಇದು ಮೇಲೂ ವಿಚಾರ ಮಾಡೋಣ

ಮನುಷ್ಯನು ಎಂದಿನಿಂದ ಸೃಷ್ಟಿಯಲ್ಲಿ ಜ್ಞಾನಪಡೆದಿರುವನೋ, ಅಂದಿನಿಂದ ಇದುವರೆಗೆ ವಿವಾದದ ಪ್ರಶ್ನೆಗಳಲ್ಲಿ ಯಾವಾಗಲೂ ಜಗಳವಾಗುತ್ತಲೇ ಇದೆ. ಈ ಜಗಳಕ್ಕೆ ಕಾರಣಗಳ್ಯಾವುವೆಂದರೆ— ಅಧಿಕಾಂಶವಾಗಿ ಶಬ್ದಗಳ ಕೆಟ್ಟ ಪ್ರಯೋಗ ಅಥವಾ ದುಷ್ಪ್ರಯೋಗ, ಕೆಲವು ಭಾವನೆಗಳು, ಪರಿಸ್ಥಿತಿಗಳ ಪ್ರಭೇದಗಳು, ಮತ್ತು ಜೊತೆಗೇ ಪಾರಸ್ಪರಿಕವಾದ ರಾಗದ್ವೇಷಕಾಮಕ್ರೋಧಾದಿಗಳು ಇವೇ ಮುಂತಾದುವುಗಳಿರುವುವು

ಜಗತ್ತಿನಲ್ಲಿ ಎಷ್ಟೇ ಧರ್ಮ, ಮತ, ಪಂಗಡ, ಪಂಥಗಳು ಆಗಿರಲಿ, ಅದು ಎಷ್ಟೇ ವ್ಯಾಪಕ ದೃಷ್ಟಿಯಿಂದಾದರೂ ರಚಿಸಲ್ಪಟ್ಟಿರಲಿ, ಎಲ್ಲಾ ಜನಗಳಿಗಾಗಿಯೂ ಸ್ಥಾಪಿತವಾಗಿರಲಿ ; ಆದರೆ ಅದರ ಅನುಯಾಯಿಗಳು ಅದರ ವಿಸ್ತಾರದ ಭೇದಭಾವಗಳನ್ನು ಬೆಳೆಯಿಸಿ ಬೆಳೆಯಿಸಿ ಸಂಕುಚಿತವಾದುದನ್ನಾಗಿ ಮಾಡಿಬಿಟ್ಟಿರುವರು. ಈ ಸಂಸಾರಕ್ಕೆ 'ಏಕೋಽಹಂ ಬಹುಸ್ಯಾಂ' ಎಂಬ ಮಹಾವಾಕ್ಯವೇ ಮೂಲವಾಗಿದೆ. ವಿನಾಯಕನನ್ನು ಮಾಡಲು ಹೋಗಿದ್ದರು, ವಾನರವಾಯಿತು— 'ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ'. ಜಗತ್ತನ್ನೇ ವ್ಯಾಪಿಸಿರುವ ಧರ್ಮವನ್ನು ರಚಿಸಲು ಹೋದರು : ಸಂಪ್ರದಾಯವು' ಬಂದಿತು.

ಆರ್ಯಸಮಾಜ, ಬ್ರಹ್ಮಸಮಾಜ, ದೇವಸಮಾಜ, ಥಿಯೋಸಾಫಿಕಲ್ ಸೊಸೈಟಿ ಮುಂತಾದ ನಿನ್ನೆಮೊನ್ನೆ ಆದ ಸಂಪ್ರದಾಯಗಳು ಮತ್ತು ನಾನಕ ಪಂಥ, ಕಬೀರ ಪಂಥ ಮುಂತಾದ ಹಿಂದಿನ ಸಂಪ್ರದಾಯಗಳು ಇದಕ್ಕೆ ಸಾಕ್ಷಿಯಾಗಿವೆ. ಮೂಲತಃ ಇವುಗಳೆಲ್ಲವೂ ಹೆಚ್ಚು ವ್ಯಾಪಕಗಳಿರುವುವು ; ಆದರೆ ವಿಸ್ತಾರ ಮತ್ತು ಅನುಯಾಯಿತ್ವವು ಇದನ್ನು ಬಲಾತ್ಕಾರವಾಗಿ ಸಂಪ್ರದಾಯವನ್ನಾಗಿ ಮಾಡಿಬಿಟ್ಟಿತು. ತತ್ವದರ್ಶಿಯಾದ ವಿದ್ವಾಂಸರು ಯಾವಾಗಲೂ ಸಂಪ್ರದಾಯಕ್ಕೆ ದೂರವಾಗಿರುವರು. ಆದರೆ ಇಂಥವರು ಎಷ್ಟು ಜನರು ? ಬಹಳ ಸ್ವಲ್ಪವೇ ಸರಿ. ಸಮಾಜದಲ್ಲಿ ಸಾಧಾರಣ ಜನಗಳ ಸಂಖ್ಯೆಯೇ ಹೆಚ್ಚಾಗಿರುವುದು ; ಆದ್ದರಿಂದ ಇವರು ಸಂಪ್ರದಾಯ ರಕ್ಷಣೆ ಮಾಡುತ್ತಿರುತ್ತಾರೆ. ಪೂರ್ವಕಾಲದ ಬಾರ್ಹಸ್ಪತ್ಯ ಅಥವಾ ಚಾರ್ವಾಕರ ತರಹ ಇತ್ತೀಚೆಗೆ ಅನೀಶ್ವರವಾದಿಗಳದ್ದೂ ಕೂಡ ಒಂದು ದೊಡ್ಡ ಸಂಪ್ರದಾಯವಾಗುತ್ತಿದೆ. ಅನೀಶ್ವರವಾದಿಗಳ ಸಂಪ್ರದಾಯವು ಬೆಳೆಯುವುದೆಂಬುದೂ ಎಲ್ಲಾ ಸಮಾಜವಾದಿಗಳೂ ಅನೀಶ್ವರವಾದಿಗಳಾಗಿಬಿಡುವರೆಂಬುದೂ ಸಂಭವವಿದೆ.

ರಷ್ಯಾದಲ್ಲಿ ಸಮಾಜವಾದ ಮತ್ತು ಅನೀಶ್ವರವಾದವು ಬೆಳೆದೇ ಇದೆ. ಯೂರೋಪಿನಲ್ಲಿ ರಾಜನೀತಿ ಮತ್ತು ಶಾಸನಗಳಲ್ಲಿ ಪಾದರಿಗಳ ಬಹಳ ದೊಡ್ಡ ಪ್ರಭಾವವು ಬಹಳ ಕಾಲದಿಂದ ನಡೆದುಬರುತ್ತಿದೆ ; ಅವರ ಕಡೆಯಿಂದ ಭಯಾನಕವಾದ ರೋಮಾಂಚಗೊಳಿಸುವ ಅತ್ಯಾಚಾರಗಳೂ ನಡೆದಿವೆ ; ಇವುಗಳಿಗೆ ಪ್ರತೀಕಾರ ಮಾಡುವುದಕ್ಕಾಗಿಯೇ ಪಾದರಿ ಮತ್ತು ಈಸಾಯಿ ಧರ್ಮಕ್ಕೆ ವಿರುದ್ಧವಾಗಿ ಆ ದೇಶದಲ್ಲಿ ಅಸಂಖ್ಯ ಜನಗಳು ತಯಾರಾಗಿಬಿಟ್ಟರು ; ಇದರಲ್ಲಿ ಯಹೂದಿಗಳದ್ದೂ ಪ್ರಭಾವವಿದ್ದಿತು. ಸಮಾಜವಾದವು ಅನೀಶ್ವರವಾದವನ್ನು ಇದೇ ಪಾಲಿಸಿಯಿಂದ ತನ್ನದ್ದಾಗಿ ಮಾಡಿಕೊಂಡಿತು.

ಭಾರತದೇಶದಲ್ಲಾದರೋ, ಬ್ರಾಹ್ಮಣ, ಮೌಲ್ವಿ ಮುಂತಾದವರು ರಾಜನೀತಿ ಮತ್ತು ರಾಜಶಾಸನದಲ್ಲಿ ತಮ್ಮ ಪ್ರಭಾವವನ್ನು ಬೀರುವುದಿಲ್ಲ ; ಆದ್ದರಿಂದ ಸಮಾಜವಾದಿ ಸಹೋದರರು ಭಾರತದಲ್ಲಿ ಯೂರೋಪಿನ ನಕಲನ್ನು ಮಾಡಲು ಸಾಧ್ಯವಿಲ್ಲ, ಅಗತ್ಯವೂ ಇಲ್ಲ ; ಇಲ್ಲಿಯೂ ಹಾಗೆಯೇ ಆಗಿಬಿಡುವುದೆಂದೂ, ಮತ್ತು ಭಾರತದ ಬಹುಸಂಖ್ಯೆಯ ಜನತೆಯು ನಾಸ್ತಿಕವಾಗಿ ಬಿಡುವುದೆಂದೂ ಒಪ್ಪಿಕೊಂಡರೂ ಕೂಡ ಭಾರತೀಯರೆಲ್ಲರೂ ಎಂದಿಗೂ ಕೂಡ ವ್ಯಾಪಕರೂಪದಿಂದ ನಾಸ್ತಿಕರಾಗಲು ಶಕ್ಯವಿಲ್ಲ. [ಸಶೇಷ

ಜಗದ್ಗುರುಗಳವರಿಗೆ ಡಾಕೋರನಲ್ಲಿ ಸಂಭ್ರಮ ಬೀಳ್ಕೊಡುವಿಕೆ

ಸ್ವಂ ಸು ತಂತಿ] ಡಾಕೋರ್ ಅ 20

ಶ್ರೀ ದ್ವಾರಕಾ ಶಾರದಾಪೀಠಾಧೀಶ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರನ್ನು ಆತ್ಮಾದರ ಮತ್ತು ಭಕ್ತಿಪೂರ್ವಕ ಬೀಳ್ಕೊಡಲು ನಿನ್ನೆ ಸಂಜೆ ಡಾಕೋರಿನಲ್ಲಿ ಭಾರೀ ಸಾರ್ವಜನಿಕ ಸಭೆ ನಡೆಯಿತು ; ಬಹುಮಂದಿ ಪ್ರಖ್ಯಾತ ವಿದ್ವಾಂಸರೂ ಪ್ರಮುಖ ದೊಡ್ಡಮನುಷ್ಯರೂ ಭಕ್ತಿಕಾಣಿಕೆ ಅರ್ಪಿಸಿದರು ; ಬೊಂಬಾಯಿ ಟ್ರಸ್ಟ್ ಆಕ್ಟನ್ನು ನಿರೋಧಿಸುವ ಮತ್ತು ಸರಕಾರವು ಅದನ್ನು ಜಾರಿಗೆ ತರಬಾರದೆಂಬ ಠರಾವು ಸರ್ವಾನುಮತದಿಂದ ಮಂಜೂರಾಗಲಾಯಿತು ; ಡಾಕೋರಿನ ರಾಮರಾಜ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿತು ; ಜಗದ್ಗುರುಗಳವರು ಸಭಿಕರನ್ನು ಆಶೀರ್ವದಿಸಿ, ಕೆಲವು ಮುಖಂಡರಿಗೆ ಬೆಳ್ಳೀ ಪದಕಗಳನ್ನು ದಯಪಾಲಿಸಿದರು ; ಜಗದ್ಗುರುಗಳವರು ಬಲೆಸಿನಾರ್‌ಗೆ ತೆರಳಿ, ಅಲ್ಲಿ ಹದಿನೈದು ದಿನಗಳಿರುವರು.

Edited, Printed and Published by Dharma Prachara Nirata M. S. Krishna Rao, at the Satyavadi Press [illegible] Mysore